ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**
**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/ಯು.ಸಿ/10/2013-14/1668 ದಿನಾಂಕ : 28.03.2014

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಕೊಪ್ಪಳ ಜಿಲ್ಲೆ.

ಮಾನ್ಯರೇ,

***ವಿಷಯ:*** ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಅನುದಾನ ಬಿಡುಗಡೆ ಕುರಿತು.
***ಉಲ್ಲೇಖ:*** ಪತ್ರ ಸಂಖ್ಯೆ.ಜಿ.ಪಂ.ಕೊ/ಆರ್ಥಿಕ/ಸ್ಕೀಂ/ಸಂ.ನೈ.ಆ/ಹಬ/2013-14

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ 2013-14ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನಕ್ಕೆ ತಾತ್ಕಾಲಿಕ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ. ಪರಿಶೀಲಿಸಿದಂತೆ ಈ ಕೆಳಕಂಡಂತಿರುತ್ತದೆ.

1. 2012-13ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕೇಂದ್ರದ ಪಾಲಿನ ಅನುದಾನ ಅಂತಿಮ ಶಿಲ್ಕು ರೂ.356.56 ಲಕ್ಷಗಳಿದ್ದು, ಪ್ರಸ್ತುತ ಸಲ್ಲಿಸಿರುವ ಹಣಬಳಕೆ ಪ್ರಮಾಣ ಪತ್ರದಲ್ಲಿ ರೂ.347.98 ಲಕ್ಷಗಳು ಆಗಿರುತ್ತದೆ.
2. 2012-13ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ರಾಜ್ಯದ ಪಾಲಿನ ಅನುದಾನ ಅಂತಿಮ ಶಿಲ್ಕು ರೂ.95.85 ಲಕ್ಷಗಳಿದ್ದು, ಪ್ರಸ್ತುತ ಸಲ್ಲಿಸಿರುವ ಹಣಬಳಕೆ ಪ್ರಮಾಣ ಪತ್ರದಲ್ಲಿ ರೂ.116.00 ಲಕ್ಷಗಳು ಆಗಿರುತ್ತದೆ.
3. ಮೇಲಿನಂತೆ ವ್ಯತ್ಯಾಸ ರೂ.11.57 ಲಕ್ಷಗಳಾಗಿದ್ದು ವಿವರಣೆ ಅಗತ್ಯವಿರುತ್ತದೆ.
4. ಕೇಂದ್ರ ಸರ್ಕಾರ ನಿಗಧಿಪಡಿಸಿರುವ ನಮೂನೆಯಲ್ಲಿ Kinds of excerised the following checks to see that money has been actually utilzed ಎಂದು ನಮೂದಿಸಿದ್ದು ಪರಿಶೀಲಿಸಿರುವ ಅಂಶಗಳನ್ನು ನಿಗಧಿತ ನಮೂನೆಯಂತೆ ನಮೂದಿಸಿರುವುದಿಲ್ಲ.
5. ಬಾಕಿ ರೂ.13.30 ಲಕ್ಷಗಳನ್ನು ಮುಂದಿನ ಸಾಲಿಗೆ ಬಳಸುವುದಾಗಿ ತಿಳಿಸಲಾಗಿರುತ್ತದೆ.
6. **ಲಭ್ಯವಿರುವ ಅನುದಾನವನ್ನು ಹೊರತುಪಡಿಸಿ ಪ್ರಗತಿಗನುಗುಣವಾಗಿ ಒಟ್ಟು ಎಷ್ಟು ಅನುದಾನ ಅವಶ್ಯವಿರುವುದಾಗಿ ತಿಳಿಸಿರುವುದಿಲ್ಲ.**

ಮೇಲಿನ ಅಂಶಗಳನ್ನು ಪರಿಶೀಲಿಸಿ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

**ಮಿಷನ್ ನಿರ್ದೇಶಕರ ಪರವಾಗಿ**
ರಾ.ನೀ.ನೈ.ಸಂಸ್ಥೆ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆರವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ/ ಫ್ಯಾಕ್ಸ್ :-22221862 E-mail : wsrdpr@gmail.com